ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.30-37
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಸಾಹತು ಕಾಲದ ವಿಜಯಪುರ ಜಿಲ್ಲೆಯ ಮಹಿಳೆಯರ ಸ್ಥಿತಿಗತಿಗಳು

**ಭೀಮಾಬಾಯಿ ಸಂ. ಮಾಳಶೆಟ್ಟಿ**
ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Abstract:**
*ಪ್ರಪಂಚದ ಇತಿಹಾಸವನ್ನು ಗಮನಿಸಿದಾಗ ಮಹಿಳೆಯರು ಯಾವ ಕ್ಷೇತ್ರದಲ್ಲಿಯೂ ಹಿಂದೆ ಬಿದ್ದಿಲ್ಲ. ಅಧಿಕಾರ, ಯುದ್ಧ, ತ್ಯಾಗ, ಸೇವೆ, ಬಲಿದಾನ ಯಾವುದೇ ಕ್ಷೇತ್ರದಲ್ಲಿ ಅವರು ತಮ್ಮ ಶ್ರೇಷ್ಠತೆಯನ್ನು ನಿರೂಪಿಸಿದ್ದಾರೆ. ಇತ್ತೀಚಿನ ಸಂಶೋಧನೆಗಳು ಪುರುಷರಿಗಿಂತ ಮಹಿಳೆಯರೇ ದೈಹಿಕವಾಗಿ, ಮಾನಸಿಕವಾಗಿ ಸದೃಢರು ಎಂಬುದನ್ನು ಬಹಿರಂಗ ಪಡಿಸಿದೆ. ಇದು ಮಹಿಳೆಯರಿಗೆ ಪ್ರಕೃತಿಯೇ ನೀಡಿದ ಕೊಡುಗೆ ಇರಬಹುದು. ವಿಶೇಷವಾಗಿ ವಸಾಹತು ಕಾಲದ ವಿಜಯಪುರ ಜಿಲ್ಲೆಯ ಮಹಿಳೆಯರ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಇತರೆ ಕ್ಷೇತ್ರದಲ್ಲಿನ ಸ್ಥಾನಮಾನ ಮತ್ತು ಸಾಧನೆಗಳ ಮಾಹಿತಿಯನ್ನು ಸೆರೆಹಿಡಿಯಲಾಗಿದೆ. ಪ್ರಸ್ತುತ ಲೇಖನದಲ್ಲಿ ಪಂಚನದಿಗಳ ಬೀಡು ಎಂದು ಖ್ಯಾತಿ ಪಡೆದಿರುವ ವಿಜಯಪುರ ಜಿಲ್ಲೆಯ ವಸಾಹತು ಕಾಲದ ಸ್ತ್ರೀಯರ ಸ್ಥಿತಿಗತಿಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ವಿಜಯಪುರ, ವಸಾಹತು ಕಾಲ, ಮಹಿಳೆಯರ ಸ್ಥಿತಿಗತಿಗಳು*

## ಪೀಠಿಕೆ

ಪಂಚನದಿಗಳ ಬೀಡು, ಕರ್ನಾಟಕದ ಪಂಜಾಬ್, ಗುಮ್ಮಟಗಳ ನಗರಿ, ಶರಣರ ನಾಡು, ಸೂಫಿ ಸಂತರ ನೆಲೆಬೀಡು, ಜಗಜ್ಯೋತಿ ಬಸವೇಶ್ವರರ ಜನ್ಮಸ್ಥಳ ಹಾಗೂ ಜಗದ್ಗುರು ಖ್ಯಾತಿಯ ಇಬ್ರಾಹಿಂ ಆದಿಲ್ ಶಾಹಿಯ ನವರಸಪುರದ ಕಲ್ಪನೆಗಳ ತವರೂರು ನಡೆದಾಡುವ ದೇವರೆಂದೇ ಖ್ಯಾತರಾದ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಜಿಯವರ ತಪೋಭೂಮಿ ವಿಜಯಪುರ ಜಿಲ್ಲೆಗೆ ಸುದೀರ್ಘವಾದ ಐತಿಹಾಸಿಕ ಹಿನ್ನೆಲೆಯಿದೆ.[1] ಇಂತಹ ಇತಿಹಾಸ ಪ್ರಸಿದ್ದ ವಸಾಹತು ಕಾಲದ ವಿಜಯಪುರ ಜಿಲ್ಲೆಯ ಮಹಿಳೆಯರ ಸ್ಥಾನಮಾನಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಪುರುಷ ಪ್ರಧಾನ ವ್ಯವಸ್ಥೆಯೇ ಗುರುತಿಸಿಕೊಂಡ ಮಹಿಳಾ ಪ್ರಾಮುಖ್ಯತೆ ಹಾಗೂ ಆ ವ್ಯವಸ್ಥೆಯೊಳಗಿನ ಎಚ್ಚೆತ್ತ ಮಹಿಳೆಯರು ಎತ್ತಿದ ಪ್ರಶ್ನೆಗಳಿಂದಾಗಿ ವಸಾಹತುಶಾಹಿ ಭಾರತವೇ ಸತಿ ನಿಷೇಧ, ಬಾಲ್ಯವಿವಾಹ ನಿಷೇಧ ಇತ್ಯಾದಿ ಮಹತ್ವಪೂರ್ಣ ಕಾಯ್ದೆಗಳೊಂದಿಗೆ, ಮತದಾನದ ಹಕ್ಕನ್ನು ಕೂಡ ಆಕೆಗೆ ದೊರಕಿಸಿಕೊಟ್ಟಿತು.

ಹತ್ತೊಂಬತ್ತನೇ ಶತಮಾನದ ಹೊತ್ತಿಗೆ ಈ ಸಮಾಜದಲ್ಲಿನ ಮಹಿಳೆ ಹಾಗೂ ಅವಳ ಸ್ಥಾನಮಾನ, ಸಮಸ್ಯೆಗಳು ಪುರುಷನಿಗಿಂತ ಭಿನ್ನವಾದುದಾಗಿದೆ ಎಂಬುದನ್ನು ಹಲವಾರು ಸುಧಾರಣಾ ತತ್ವಗಳ ಮೂಲಕ ನಿರ್ವಚಿಸಿಕೊಟ್ಟದ್ದೇ ಪುರುಷ ಸಮುದಾಯ. ಇದನ್ನು ಆಧರಿಸಿಯೇ ಮಹಿಳಾ ಸಂಘ ಸಂಸ್ಥೆಗಳು ತಮ್ಮ ಕಾರ್ಯ ಚಟುವಟಿಕೆಯನ್ನು ರೂಪಿಸಿಕೊಂಡು ಕ್ರಿಯಾಶೀಲವಾದವು ಸಹ. ಆದರೆ

***Please cite this article as:*** ಪ್ರಶಾಂತ ಹೆಚ್.ವೈ. (2024). ಅಪರಾಧದ ಪುನರಾವರ್ತನೆಯ ತಡೆಗಟ್ಟುವಿಕೆ ಮತ್ತು ಸಮಾಜಕಾರ್ಯದ ಮಧ್ಯಸ್ಥಿಕೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(4), 30–37

ಇಪ್ಪತ್ತನೇ ಶತಮಾನದ ಆರಂಭದ ಹೊತ್ತಿಗೆ ಪ್ರಬಲವಾದ ರಾಷ್ಟ್ರೀಯ ಹೋರಾಟವು ಮಹಿಳೆಯ ಸಾಮಾಜಿಕ ಸ್ಥಿತಿಗತಿಯ ಸಂದರ್ಭದಲ್ಲಿ ಮಂಡಿಸಿದ ಓರಿಯಂಟಲ್ ವಿಚಾರಧಾರೆಯ ಮಹಿಳಾ ಸಮಸ್ಯೆಗಳ ಸಂದರ್ಭದಲ್ಲಿ ಹೊಸ ವಿಚಾರವೊಂದನ್ನು ಮುಂಚೂಣಿಗೆ ತಂದಿತು. ಅದರ ಪ್ರಕಾರ ಈ ಹೊತ್ತಿನ ಮಹಿಳೆಯರ ಅಧೋಗತಿಗೆ ಕಾರಣವಾದ ಸತಿ, ಪರದಾ, ಬಾಲ್ಯವಿವಾಹ ಇತ್ಯಾದಿ ಪದ್ಧತಿಗಳು ಅದರ ಮೂಲಚೈತನ್ಯದಲ್ಲಿ ಇದ್ದ ವಿಚಾರಗಳಲ್ಲ. ಭಾರತೀಯ ಸಂಸ್ಕೃತಿಯು ಹೆಣ್ಣನ್ನು ದೇವಿ ಎಂದು ಗೌರವಿಸಿ ಪೂಜಿಸುವ ಆದರ್ಶವನ್ನು ಹೊಂದಿದ ಸಂಸ್ಕೃತಿ ಎಂಬುದಾಗಿತ್ತು.[2]

ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ಮಹೋನ್ನತವಾದದ್ದನ್ನು ಸಾಧಿಸಿ ಆಗಸದೆತ್ತರ ಬೆಳೆದು ಚರಿತ್ರೆಯಲ್ಲಿ ಶಾಶ್ವತ ಸ್ಥಾನ ಪಡೆದ ಮಹಿಳಾಮಣಿಗಳು ಇಂದಿಗೂ ಸ್ಫೂರ್ತಿಯಾಗಿದ್ದಾರೆ, ಅಂತಹ ಮಹಿಳೆಯರಲ್ಲಿ 12 ನೇ ಶತಮಾನದ ಶಿವಶರಣೆಯರಾದ ಅಕ್ಕನಾಗಮ್ಮ, ನಾವಂದಿಗೆಯ ಗುಡ್ಡೆವ್ವ, ತಿಲಕವ್ವೆ, ಗಂಗಾಂಬಿಕೆ, ನೀಲಾಂಬಿಕೆ, ಮುಕ್ತಾಯಕ್ಕ, ಗುಡ್ಡಾಪುರದ ದಾನಮ್ಮ, ಬಿಜಾಪುರದ ರಾಜಪ್ರತಿನಿಧಿಯಾಗಿದ್ದ ಚಾಂದ್ ಬೀಬಿ, ಬ್ರಿಟಿಷರನ್ನು ಎದುರಿಸಿ ಭಾರತೀಯ ಹೋರಾಟಗಾರರಿಗೆ ಸ್ಫೂರ್ತಿಯಾದ ಜೈನಾಪೂರ ವಾಡೆಯ ರಾಣಿ ವೀರ ಕಾಶಿಬಾಯಿ, ಬ್ರಿಟಿಷರಿಗೆ ಎದೆ ಗುಂದದೆ ಸಿಂಹ ಸ್ವಪ್ನವಾಗಿದ್ದ ಕಿತ್ತೂರಿನ ಚೆನ್ನಮ್ಮಾಜಿ ಹುಟ್ಟಿದ ಊರು ವಿಜಯಪುರ ಜಿಲ್ಲೆಯ ಜಂಬಗಿ ವಾಡೆ (ಚೆನ್ನಮ್ಮಳ ತಾಯಿ ಪದ್ಮಾವತಿ ತವರುಮನೆ), ಮೈಲಾರ ಸಿದ್ದಮ್ಮ, ಶ್ರೀಮತಿ ರಮಾಬಾಯಿ, ಶ್ರೀಮತಿ ಪದ್ಮಾವತಿಬಾಯಿ ವಾಮನರಾವ್ ಬಿದರಿ, ಶ್ರೀಮತಿ ಗಂಗವ್ವಾ ರಾಯಪ್ಪಾ ಬೆಳಗಲಿ, ಶ್ರೀಮತಿ ರೇಖಾ ಕಾಖಂಡಕಿ, ಅಮೀರಬಾಯಿ ಕರ್ನಾಟಕಿ, ಕಡ್ಲಿಮಟ್ಟಿ ಕಾಶಿಬಾಯಿ, ಮಲ್ಲಿಕಾ ಘಂಟಿ, ಶಶಿಕಲಾ ವೀರಯ್ಯಸ್ವಾಮಿ, ಶಾಂತಾ ಇಮ್ರಾಪುರ, ಡಾ.ಇಂದುತಾಯಿ ಪಟವರ್ಧನ್, ಹಾಗೂ ಕರ್ನಾಟಕ ರಾಜ್ಯದ ಏಕೈಕ ಮಹಿಳಾ ವಿಶ್ವವಿದ್ಯಾಲಯ, ಮತ್ತು ಶಕುಂತಲಾ ಬಾಲಿಕೆಯರ ಮಾಡೆಲ್ ಮರಾಠಿ ಹಿರಿಯ ಪ್ರಾಥಮಿಕ ಶಾಲೆ ಇನ್ನೂ ಮುಂತಾದ ಮಹಿಳೆಯರ ಸಾಧನೆಗಳು ನಮಗೆ ಸ್ಫೂರ್ತಿಯಾಗಿವೆ.

### ರಾಜಕೀಯವಾಗಿ ಮಹಿಳೆಯರ ಸ್ಥಾನಮಾನ

ಮಧ್ಯಕಾಲೀನ ಕರ್ನಾಟಕದಲ್ಲಿ ಸ್ತ್ರೀಯರು, ರಾಣಿಯರು ರಾಜಕೀಯ ಕ್ಷೇತ್ರಗಳಲ್ಲಿ ಪುರುಷನೊಂದಿಗೆ ಭಾಗಿಯಾಗಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ವಿಜಯಪುರ ಜಿಲ್ಲೆಯ ಶಾಸನಗಳಲ್ಲಿ ಒಂದನೆಯ ಸೋಮೇಶ್ವರನ ರಾಣಿ ಕೇತಲದೇವಿ ತರ್ದವಾಡಿ ನಾಡಿನ ಅಗ್ರಹಾರ ಪೊನ್ನವಾಡವನ್ನು, ಆರನೆಯ ವಿಕ್ರಮಾದಿತ್ಯನ ರಾಣಿ ಮೈಳಲದೇವಿಯು ಅಗ್ರಹಾರ ಕನ್ನವಳಿಯನ್ನು ಆಳುತ್ತಿದ್ದಳು. ಆದಿಲ್ ಶಾಹಿಗಳ ಆಡಳಿತದಲ್ಲಿ ರಾಜಮಾತೆ ಪೂಜಿಶಾತೂನ, ಚಾಂದಬೀಬಿ, ಮಹ್ಮದನ ರಾಣಿ ಭಾರಿ ಸಾಹೇಬಾ ಮುಂತಾದವರು. 1957ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇವಾಡಿ ಮತಕ್ಷೇತ್ರದಿಂದ ಗೆದ್ದ ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಶಹಾ, ಶ್ರೀಮತಿ ವಿಮಲಾಬಾಯಿ ಜಗದೇವರಾದ ದೇಶಮುಖ ಮುಂತಾದವರು ರಾಜಕೀಯವಾಗಿ ಪ್ರಸಿದ್ಧಿ ಪಡೆದಿದ್ದಾರೆ.[3]

### ಚಾಂದ್ ಬೀಬಿ: ದಖ್ಖನ್ನಿನ ಯೋಧ ರಾಣಿ

ಚಾಂದ್ ಬೀಬಿ (1550–1599), ಮಧ್ಯಕಾಲೀನ ಭಾರತದ ಮುಸ್ಲಿಂ ಮಹಿಳೆ ಯೋಧೆಯಾಗಿದ್ದರು. ರಾಜಪ್ರತಿನಿಧಿಯಾಗಿ ಬಿಜಾಪುರದ (1580–1590) ಮತ್ತು ಅಹ್ಮದನಗರದ ರೀಜೆಂಟ್ (1596–1599) ಆಗಿದ್ದರು. ಅಹಮದ್‌ನಗರ, ಬಿಜಾಪುರ ಮತ್ತು ಗೋಲ್ಕಂಡ ರಾಜ್ಯಗಳನ್ನು ಆಳಿದ ಚಾಂದ್ ಬೀಬಿಯ ಕಥೆಯು ಗಮನಾರ್ಹವಾಗಿದೆ. ಚಾಂದ್ ಬೀಬಿ 1550 ರಲ್ಲಿ ಅಹಮದ್ ನಗರದ ಹುಸೇನ್ ನಿಜಾಮ್ ಷಾ ಮತ್ತು ಅವನ ಹಿಂದೂ ಪತ್ನಿ ಚಾಂದ್ ಸುಲ್ತಾನ ಎಂಬ ಸುಲ್ತಾನನಿಗೆ ಜನಿಸಿದಳು.[4] ಚಾಂದ್ ಬೀಬಿ, ಚಾಂದ್ ಖಾತುನ್ ಅಥವಾ ಚಾಂದ್ ಸುಲತಾನ ಎಂದೂ ಕರೆಯುತ್ತಾರೆ. ಅಹ್ಮದ್‌ನಗರದ ಉತ್ತರ

ಭಾರತದ ಸುಲ್ತಾನರ ಮುಸ್ಲಿಂ ಸಾಮ್ರಾಜ್ಞಿ, ಚಾಂದ್ ಬೀಬಿಯ ತನ್ನನ್ನು ತಾನು ಕೆಚ್ಚೆದೆಯ ಯೋಧ ಎಂದು ಗುರುತಿಸಿಕೊಂಡಳು ಮತ್ತು ಭಾರತದ ಡೆಕ್ಕನ್ ಪ್ರದೇಶದಲ್ಲಿ ಅವಳ ಶೌರ್ಯಕ್ಕಾಗಿ ಸ್ಮರಿಸಲ್ಪಟ್ಟಳು. ಚಾಂದ್ ಬೀಬಿಯ ರಾಜಕೀಯ ಸಾಧನೆ ವಸಾಹತು ಕಾಲಘಟ್ಟದ ಮಹಿಳೆಯರಿಗೆ ಸ್ಫೂರ್ತಿಯಾಗಿದೆ.

**ಸಾಮಾಜಿಕವಾಗಿ ಮಹಿಳೆಯರ ಸ್ಥಾನಮಾನ**

ವೇದಗಳ ಕಾಲದಲ್ಲಿ ಸ್ತ್ರೀಯನ್ನು "ಯತ್ರ ನಾರ್ಯಸ್ತು ಪೂಜ್ಯಂತೇ ತತ್ರ ರಮಂತೇ ದೇವತಾ" ಎಂದು ಹೇಳಿದವರೇ "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದಿದ್ದಾರೆ, ವೇದ, ಉಪನಿಷತ್ತು, ಪುರಾಣ, ಬ್ರಾಹ್ಮಣ್ಯಕ ಮತ್ತು ಸ್ಮೃತಿಗಳಲ್ಲಿ ಉಲ್ಲೇಖವಾಗಿರುವ ಮಹಿಳೆಯ ಸ್ಥಾನಮಾನಗಳು ನಿರಾಶಾದಾಮಕವಾಗಿವೆ. ಮುಂದೆ ಬಂದ ಜೈನ ಬೌದ್ಧ ಧರ್ಮಗಳಲ್ಲಿ ಮಹಿಳೆಯ ಸ್ಥಾನಮಾನಗಳು ಸುಧಾರಿಸಿದರೂ ಕೂಡ ಅಷ್ಟೊಂದು ತೃಪ್ತಿಕರವಾಗಿ ಕಾಣುವುದಿಲ್ಲ. ಆದರೆ ವಸಾಹತು ಕಾಲಘಟ್ಟದ ವಿಜಯಪುರ ಜಿಲ್ಲೆಯ ಮಹಿಳೆಯರ ಸಾಮಾಜಿಕ ಸ್ಥಾನಮಾಗಳು ತೃಪ್ತಿದಾಯಕವಾಗಿವೆ.[5]

**ಜಾತಿ ವ್ಯವಸ್ಥೆ**

ಜಾತಿ ಪದ್ಧತಿಯು ಪರಂಪರೆಯಿಂದ ಬಂದುದಾಗಿದ್ದು, ಇದರಲ್ಲಿ ಕುರುಬರು, ಅಗಸರು, ಕಬ್ಬಲಿಗರು, ಉಪ್ಪಾರರು, ಕುಂಬಾರರು, ಗಾಣಿಗರು, ಚಲವಾದಿಗಳು, ಜೀನುಗಾರರು, ಡೋರರು, ದರ್ಜಿಗಳು, ದೇವಾಂಗದವರು, ನೇಕಾರರು, ಪಚ್ಚೇಗಾರರು, ಬಣಿಜಿಗರು, ಬೇಡರು, ಬ್ರಾಹ್ಮಣರು, ಭಜಂತ್ರಿಯವರು, ಮರಾಠರು, ಮಾದಿಗರು, ರೆಡ್ಡಿಗಳು, ಲಂಬಾಣಿಗಳು, ಲಿಂಗಾಯತರು, ವಡ್ಡರು, ವಿಶ್ವಕರ್ಮರು, ಶಿಳ್ಳೆಕ್ಯಾತರು, ಸಮಗಾರರು, ಹಡಪದರು, ಹೊಲೆಯರು ಹೀಗೆ ವಿವಿಧ ಜಾತಿ ಮತ್ತು ಬುಡಕಟ್ಟು ಜನಾಂಗದವರಿದ್ದರು.[6]

**ವಿವಾಹ ಪದ್ಧತಿ**

ಸಾಮಾಜಿಕ ವ್ಯವಸ್ಥೆಯಲ್ಲಿ ಏಕ ಪತ್ನಿತ್ವವನ್ನು ಸಾಮಾನ್ಯವಾಗಿ ಎಲ್ಲರೂ ಅನುಸರಿಸುವಂತಹ ವಿವಾಹವಾಗಿದ್ದು, ಆದರೆ ಪ್ರಾಚೀನ ಮತ್ತು ಮಧ್ಯಕಾಲೀನ ಸಮಾಜದಲ್ಲಿ ಮೇಲ್ವರ್ಗದವರು, ಸರದಾರರು, ಶ್ರೀಮಂತ ಗಣ್ಯರು ಬಹುಪತ್ನಿತ್ವವನ್ನು ಅನುಸರಿಸುತ್ತಿದ್ದರು. ಆದರೆ ವಿವಾಹದ ನಿಯಮಗಳು ಜಾತಿಯಿಂದ ಜಾತಿಗೆ ಭಿನ್ನವಾಗಿದ್ದವು.[7] ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ಸವತಿಯರ ಕಿರುಕುಳ, ಬಹುಪತ್ನಿತ್ವ, ಅನಿಷ್ಟ ಪದ್ಧತಿಗಳಿದ್ದು, ವಿಧವಾ ವಿವಾಹಕ್ಕೆ ಪ್ರೋತ್ಸಾಹ ಇರಲಿಲ್ಲ, ಉಡಕಿ ಪದ್ಧತಿ ರೂಢಿಯಲ್ಲಿತ್ತು.

**ಉಡುಪುಗಳು**

ಮಹಿಳೆಯರು ಸಾಮಾನ್ಯವಾಗಿ ಸೀರೆಯನ್ನು ಕಚ್ಚೆಹಾಕಿ ಉಡುವುದು ಮತ್ತು ಇಳಕಲ್ ಸೀರೆ ಮತ್ತು ಗುಳೇದಗುಡ್ಡದ ಕಣ ಜನಪ್ರಿಯವಾಗಿವೆ. ವಿಶೇಷ ಸಂದರ್ಭಗಳಲ್ಲಿ ರೇಷ್ಮೆ ಸೀರೆಗಳನ್ನು ಧರಿಸುತ್ತಿದ್ದರು. ವಸಾಹತು ಕಾಲಘಟ್ಟದಲ್ಲಿ ನೈಲಾನ್, ಪಾಲಿಸ್ಟರ್, ಟೆರಿಲಿನ್, ಟೆರಿಕಾಟ್ ಮೊದಲಾದ ಉಡುಪು ಧರಿಸುತ್ತಿದ್ದರು. ವಿಧವೆಯರು ಕೆಂಪು ಸೀರೆ ಧರಿಸುತ್ತಿದ್ದರು.

**ಆಭರಣಗಳು**

ಸ್ತ್ರೀಯರು ಆಭರಣ ಪ್ರಿಯರಾಗಿದ್ದು, ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಆಭರಣ ಬಳಸುತ್ತಿದ್ದರು. ಕೊರಳಿಗೆ ಕಾಸಿನ ಸರ, ಗುಂಡಿನಟಿಕ್ಕೆ, ಮೇಲಗುಂಡು, ಭೋರಮಳ, ಕಂಠಿಹಾರ, ಚಪಲಹಾರ, ಕಿವಿಗೆ ಓಲೆ, ಬುಗುಡಿ, ಝುಮಕಿ, ಮೂಗಿಗೆ ನತ್ತು, ತೋಳಿಗೆವಂಕಿ, ಸರಗಿ, ಪಾಟ್ಲಿ, ಬಿಲ್ವಾರ್, ಬಳೆ, ಬೆರಳಿಗೆ ಉಂಗುರ, ಸೊಂಟಕ್ಕೆ ಡಾಬು ಕೈಗೆ ಗೋಟು ಮತ್ತು ಕಾಲಿಗೆ ತೋಡ ಬಳಸುತ್ತಿದ್ದರು.[8]

**ಮನರಂಜನೆ**

ಬಯಲಾಟ, ನಾಟಕ, ಸಂಗೀತ, ನೃತ್ಯ, ಜಾನಪದ ನೃತ್ಯ, ಹುಲಿಕಟ್ಟಿ ಆಟ, ಕೋಳಿ ಕಾಳಗ, ಟಗರಿನ ಕಾಳಗ, ಹುಂಜಿನ ಕಾಳಗದೊಂದಿಗೆ, ಜಾನಪದ ಹಾಡು ಮತ್ತು ಡೋಳ್ಳಿನ ಪದಗಳನ್ನು ಹಾಡುತ್ತಿದ್ದರು.[9]

**ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ**

**ಜೈನಾಪುರ ವಾಡೆಯ ರಾಣಿ ವೀರ ಕಾಶಿಬಾಯಿ**

ಜೈನಾಪುರ ಧೀರ ಮಹಿಳೆ ಕಾಶಿಬಾಯಿಯ ಸ್ವಾತಂತ್ರ್ಯದ ಸ್ವಾಭಿಮಾನದ ಪ್ರತೀಕ, ಬಿಜಾಪುರ ಜಿಲ್ಲೆ ಬಬಲೇಶ್ವರ ತಾಲೂಕಿನ ಗ್ರಾಮ ಜೈನಾಪುರ ಇದು ದೇಶಗತ್ತಿಯ ಮನೆತನ ಇತಿಹಾಸವನ್ನು ಸಾರುವ ಈ ದೇಸಾಯಿ ಮನೆತನವು 25 ಮನೆತನಗಳನ್ನು ನಿಭಾಯಿಸುವುದರೊಂದಿಗೆ, ಕಂದಾಯ ಮತ್ತು ನ್ಯಾಯಕ್ಕೆ ಹೆಸರು ಪಡೆದಿತ್ತು. ದೇಶಗತ್ತಿ ಮನೆತನದ ಸಂಗಪ್ಪ ದೇಸಾಯಿ ಇವರಿಂದ ಆರಂಭವಾದ ಈ ಕೋಟೆಯನ್ನು 1890 ರಿಂದ 1950 ರವರೆಗೆ ಆಳ್ವಿಕೆ ಮಾಡಿದ ಏಳನೇ ತರಗತಿ ವಿದ್ಯಾಭ್ಯಾಸ ಮಾಡಿದ ಕಾಶಿಬಾಯಿ ಸೊನ್ನ ಗ್ರಾಮದ ಪ್ರತಿಭೆ. 16000 ಎಕರೆ ಭೂಮಿ, 22 ಹಳ್ಳಿಗಳನ್ನು ನಿಭಾಯಿಸಿ ಬ್ರಿಟಿಷರನ್ನು ಎದುರು ಹಾಕಿಕೊಂಡು ಭಾರತೀಯರಿಗೆ ಸ್ಪೂರ್ತಿಯಾದ ಮಹಿಳೆ ಕಾಶಿಬಾಯಿಯವರು. ಬಿಜಾಪುರದಿಂದ ಜೈನಾಪುರಕ್ಕೆ ಹೋಗಲು ಒಂದು ವಿದೇಶಿ ದುಭಾರಿ ಕಾರು (ರೋಲ್ಸ್ ರಾಯ್ಸ್ ಕಾರು) ಖರಿದೀಸಿದ್ದರು. ಆದರೆ ಬ್ರಿಟಿಷರು ದುಭಾರಿ ಬೆಲೆಯುಳ್ಳದ್ದು ಬ್ರಿಟಿಷರಿಗೆ ಮಾತ್ರ ಅನ್ನೊ ಮನೊಧೋರಣೆ ಉಳ್ಳವರಾಗಿದ್ದು ಮರಳಿ ಕೊಡುವಂತೆ ಹೇಳಿದ್ದರು, ಆದರೆ ಕಾಶಿಬಾಯಿ ನೀರಾಕರಿಸಿದ್ದಕ್ಕೆ, ಕಾರು ಪರವಾನಗಿಯನ್ನು ರದ್ದುಪಡಿಸಿದರು. ಅಂದು ಇಷ್ಟು ದುಭಾರಿಯಾದ ರೊಲ್ಸ್ ರಾಯ್ಸ್ ಕಾರು ಎರಡೇ ಇತ್ತು, ಒಂದು ಮೈಸೂರಲ್ಲಿ ಇನ್ನೊಂದು ಕಾಶಿಬಾಯಿಯವರ ಬಳಿ ಆದರೆ ದಿಟ್ಟ ಕಾಶಿಬಾಯಿಯವರು ಜೈನಾಪುರದ ತನ್ನ ಮನೆಯ ಮುಂದೆ ದುಭಾರಿ ಕಾರು ನಿಲ್ಲಿಸಿ ಅದರ ಮೇಲೆ ಸಗಣಿಯನ್ನು(ಕುಳ್ಳನ್ನು) ಬಡೆದು ನಾಶ ಮಾಡಿದರು. ಇದು 1942 ರಲ್ಲಿ ನಡೆದದ್ದು ಹಾಗಾಗಿ ಭಾರತೀಯ ಹೋರಾಟಗಾರರಿಗೆ ಕಾಶಿಬಾಯಿಯ ಈ ದಿಟ್ಟತನ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪೂರ್ತಿಯಾಯಿತು.[10]

**ಮೈಲಾರ ಸಿದ್ದಮ್ಮ**

ಮೈಲಾರ ಸಿದ್ದಮ್ಮ ಅವರು ಬಾಗಲಕೋಟೆ ಜಿಲ್ಲೆಯ ಬ್ಯಾಡಗಿ ತಾಲೂಕಿನ ಮೋಟೆಬೆನ್ನುರು ಗ್ರಾಮದಲ್ಲಿ ಜನಿಸಿದರು. ಸಿದ್ದಮ್ಮ ಜಿಲ್ಲೆಯ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ ಮಹಾದೇವ ಅವರ ಪತ್ನಿ. ಸಿದ್ದಮ್ಮ ಅವರು ಕಸ್ತೂರ ಬಾ ಗಾಂಧಿಯವರೊಂದಿಗೆ ಅಸಹಕಾರ ಚಳವಳಿಯ ಹೋರಾಟದಲ್ಲಿ ಭಾಗವಹಿಸಿ, ಮತ್ತೇ ಜೈಲು ಪಾಲಾದರು. ಸಿದ್ದಮ್ಮ ಜೈಲಿನಿಂದ ಹೊರಬಂದಾಗ ಮೋಟೆಬೆನ್ನೂರಿಗೆ ಕಳುಹಿಸಲಾಯಿತು. ಮೋಟೆಬೆನ್ನೂರು ಸುತ್ತಮುತ್ತ ಗಾಂಧಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಪರಿಚಯಿಸಿ ಅನುಷ್ಠಾನಗೊಳಿಸುವಲ್ಲಿ ಮುಂದಾಳತ್ವ ವಹಿಸಿದ್ದರು. ಮೋಟೆಬೆನ್ನೂರಿನ ಗಾಂಧಿ ಆಶ್ರಮದಲ್ಲಿ ನಡೆದ ಎಲ್ಲ ರಚನಾತ್ಮಕ ಕಾರ್ಯಕ್ರಮಗಳಿಗೆ ಸಿದ್ದಮ್ಮನವರ ಜೊತೆಯಲ್ಲಿ ಅವರ ಅತ್ತೆ ಬಸಮ್ಮ, ಸೋದರ ಮಾವ ಲಿಂಗಣ್ಣ, ಚಿಕ್ಕಪ್ಪ ನಿಂಗಣ್ಣ ಚಾಲನೆ ನೀಡಿದರು. ಅದಕ್ಕಾಗಿ ಸಿದ್ದಮ್ಮ ತನ್ನ ಜೀವನವನ್ನು ಮುಡಿಪಾಗಿಟ್ಟಳು.

ಮೈಲಾರ ದಂಪತಿಗಳು ಹಳ್ಳಿಗರ ಸೇವೆ ಮಾಡಲು ಒಂದು ಸೇವಾಶ್ರಮ ಪ್ರಾಂಭಿಸಿದ್ದರು. ಬ್ರಿಟಿಷರು ಪತ್ನಿ ಸಿದ್ದಮ್ಮಳನ್ನು ಹುಬ್ಬಳ್ಳಿಗೆ ಕಳುಹಿಸಿ ಇತ್ತ ಹೊಸರಿತ್ತಿಯಲ್ಲಿನ ಖಜಾನೆಗೆ ಮುತ್ತಿಗೆ ಹಾಕಿದಾಗ, ಅಂದೇ 1942ರ ಏಪ್ರಿಲ್ 1 ರಂದು ಪೋಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಪತಿಯ ಮರಣದ ನಂತರವೂ ಹೋರಾಟಗಾರ್ತಿಯಾದ ಪತ್ನಿ ಸಿದ್ದಮ್ಮ ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದರು.[11]

**ಡಾ.ಇಂದುತಾಯಿ ಪಟವರ್ಧನ್**

ಜಮಖಂಡಿಯ ಅತ್ಯಂತ ಸುಪ್ರಸಿದ್ದ ವ್ಯಕ್ತಿ ಡಾ. ಇಂದುತಾಯಿ ಪಟವರ್ಧನ್ (1926 1999), ದೊರೆ ಪರಶುರಾಮರಾವ್ ಅವರ ಸಹೋದರಿ. ರಾಜಕುಮಾರಿಯು ಜಮಖಂಡಿ ಮತ್ತು ಕೊಲ್ಹಾಪುರದಲ್ಲಿ ಶಿಕ್ಷಣವನ್ನು ಪಡೆದರು ಅಲ್ಲಿ ಅವರು

ಔದ್ಯೋಗಿಕ ಚಿಕಿತ್ಸೆ ಮತ್ತು ಹೋಮಿಯೋಪತಿಯನ್ನು ಅಧ್ಯಯನ ಮಾಡಿದರು. ತನ್ನ ಅರಮನೆಯ ಸೌಕರ್ಯಗಳನ್ನು ತ್ಯಾಗ ಮಾಡಿ, 1942 ರಲ್ಲಿ ಸಬರಮತಿಯಲ್ಲಿ ಗಾಂಧೀಜಿಯವರ ಚಳವಳಿಗೆ ಸೇರಿದರು. ಭಾರತೀಯ ರೆಡ್ ಕ್ರಾಸ್‌ಗೆ ಸೇರಿದರು ಮತ್ತು ಎರಡನೆಯ ಮಹಾಯುದ್ಧದ ಸಮಯದಲ್ಲಿ ಬರ್ಮಾ ಮುಂಭಾಗದಲ್ಲಿ ಕೆಲಸ ಮಾಡಲು ಸ್ವಯಂಸೇವಕರಾದರು. ಆಗ್ನೇಯ ಏಷ್ಯಾದಲ್ಲಿ ಕೆಲಸ ಮಾಡಿದ ಮೊದಲ ಭಾರತೀಯ ಮಹಿಳೆ. ವಿಭಜನೆಯ ನಂತರ ಅವರು ಫಿರೋಜ್‌ಪುರದಲ್ಲಿ ಪಾಕಿಸ್ತಾನದಿಂದ ನಿರಾಶ್ರಿತರು ಮತ್ತು ಮಹಿಳೆಯರ ಅಪಹರಣಕ್ಕೊಳಗಾದವರ ಪುನರ್ವಸತಿ ಮತ್ತು ಪುನರ್ವಸತಿಗಾಗಿ ಕೆಲಸ ಮಾಡಿದರು. ಅಲ್ಲಿ ಲೇಡಿ ಮಾರ್ಟನ್ ಜೊತೆ ಅವರು ಜಂಟಿ ಶಿಬಿರದ ಕಮಾಂಡೆಂಟ್ ಆಗಿದ್ದರು. ಅವರಿಗೆ ಮಹಾರಾಷ್ಟ್ರದಿಂದ ದಲಿತ ಮಿತ್ರ ಮತ್ತು ಕರ್ನಾಟಕದಿಂದ ತಾಮ್ರ ಪತ್ರ ಪ್ರಶಸ್ತಿಯನ್ನು ನೀಡಲಾಯಿತು. ಡಾ. ಇಂದುತಾಯಿ ಪಟವರ್ಧನ್ ಅವರು ಕುಷ್ಠರೋಗಿಗಳ ಆರೈಕೆಗಾಗಿ ಪುಣೆಯ ಹೊರವಲಯದಲ್ಲಿ ಆನಂದ ಗ್ರಾಮವನ್ನು ಸ್ಥಾಪಿಸಿದರು.

**ಶ್ರೀಮತಿ ಪದ್ಮಾವತಿಬಾಯಿ ವಾಮನರಾವ್ (ದೇಸಾಯಿ) ಬಿದರಿ:** ಶ್ರೀಮತಿ ಪದ್ಮಾವತಿಬಾಯಿಯವರು ಬಿಜಾಪುರ ತಾಲೂಕಿನ ಕಾಖಂಡಕಿ ಗ್ರಾಮದಲ್ಲಿ ಒಂದು ಸಂಪ್ರದಾಯಸ್ಥ ಬ್ರಾಹ್ಮಣರ ಕುಟುಂಬದಲ್ಲಿ 1914 ರಲ್ಲಿ ಜನಿಸಿದರು. 1925ರಲ್ಲಿ ಸ್ವಾತಂತ್ರ್ಯ ವೀರರಾದ ಶ್ರೀ ವಾಮನರಾವ್ ದೇಸಾಯಿ (ಬಿದರಿ) ಯವರನ್ನು ವಿವಾಹವಾದರು. ಪದ್ಮಾವತಿಯವರು ದೇಶಪ್ರೇಮಿ ವಾಮನರಾಯರ ಎಲ್ಲ ಕಾರ್ಯಗಳಲ್ಲಿ ಸಹಾಯ ಸಹಕಾರವನ್ನು ಕೊಡುತ್ತಿದ್ದರಲ್ಲದೇ ಅವರ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿಯನ್ನಿತ್ತರು. ಇವರು ಕುಂದರನಾಡಿಗೆ ಹಳ್ಳಿಗಳಾದ ಹುದಲಿ, ಪಾಚ್ಛಾಪುರ, ಕೊಳವಿ, ಅಕ್ಕತಂಗಿಯರ ಹಾಳ ಮೊದಲಾದ ಗ್ರಾಮಗಳಿಗೆ ಹೋಗಿ ಖಾದಿ ಪ್ರಚಾರ ಮಾಡುತ್ತಿದ್ದರು. ಪಾಚ್ಛಾಪುರದಲ್ಲಿದ್ದಾಗ ದಿನ–ನಿತ್ಯ ಕಾಲನಡಿಗೆಯಿಂದ ಗಾಳಿ, ಮಳೆ, ಬಿರಿಬಿಸಿಲೆನ್ನದೆ ತಲೆಯ ಮೇಲೆ ಖಾದಿ ಬಟ್ಟೆಯ ಗಂಟನ್ನು ಹೊತ್ತುಕೊಂಡು ಪದ್ಮಾವತಿಯವರು ಪತಿಯ ಜೊತೆಗೂಡಿ ಖಾದಿ ಪ್ರಚಾರದೊಂದಿಗೆ ಗ್ರಾಮ ನೈರ್ಮಲ್ಯ, ಪಾನ ಪ್ರತಿಬಂಧ, ಬಡವರಿಗೆ ಉಚಿತವಾಗಿ ಔಷಧ ಹಂಚುವುದು, ದಿನಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಗ್ರಾಮೀಣ ಜನತೆಗೆ ತಿಳಿಸಿಕೊಡುವುದು ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದರು.

1932ರಲ್ಲಿ ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ್ದರು, 1933ರಲ್ಲಿ ಪದ್ಮಾವತಿಯವರು ವೈಯಕ್ತಿಕ ಸತ್ಯಾಗ್ರಹವನ್ನು ಪ್ರಾರಂಭಿಸಿದರು. 1942ರಲ್ಲಿ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಹಿಂಡಲಗಾ ಜೈಲು ಸೇರಿದರು. 1932ರಲ್ಲಿ ಬೆಳಗಾವಿಯಲ್ಲಿ ಕಾಯ್ದೆಭಂಗ ಚಳುವಳಿಯು ಉಗ್ರಸ್ವರೂಪ ತಾಳಿತು. ಆಗ ಪದ್ಮಾವತಿಯವರು ಗರ್ಭಿಣಿಯಾಗಿದ್ದರು ಈ ಚಳುವಳಿಯಲ್ಲಿ ಹಿಂದೆ ಬೀಳಲಿಲ್ಲ. ಹೀಗೆ ಸ್ವಾತಂತ್ರ್ಯ ಹೋರಾಟಗಾರರಿಗೆ ಪದ್ಮಾವತಿಬಾಯಿ ಸ್ಫೂರ್ತಿಯಾಗಿದ್ದಾರೆ.[12]

**ಶ್ರೀಮತಿ ಗಂಗವ್ವಾ ರಾಯಪ್ಪಾ ಬೆಳಗಲಿ(ಸಾವಳಗಿ)**

ಶ್ರೀಮತಿ ಗಂಗವ್ವನವರು ಶ್ರೀ ರಾಯಪ್ಪ ಬೆಳಗಲಿ ಇವರ ಪತ್ನಿಯಾಗಿದ್ದು, ಪತಿಯು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದಾಗ ಅವರಿಗೆ ಎಲ್ಲ ಬಗೆಯ ಸಹಾಯ ಸಹಕಾರವನ್ನಿತ್ತು ಪ್ರೋತ್ಸಾಹಿಸಿದರು. ಅಲ್ಲದೆ ತಮ್ಮನ್ನು ತಾವೇ ಹೋರಾಟದಲ್ಲಿ ತೊಡಗಿಸಿಕೊಂಡು ಅಥಣಿ ಹಾಗೂ ಬೆಳಗಾವಿಯ ಹಿಂಡಲಗಿ ಜೈಲಿನಲ್ಲಿ ಸೆರೆಮನೆಯ ವಾಸವನ್ನು ಅನುಭವಿಸಿದ್ದಾರೆ. 1942ರಲ್ಲಿ ಪ್ರಾರಂಭವಾದ ಚಲೇಜಾವ್ ಚಳುವಳಿಯಲ್ಲಿ ಪತಿ ರಾಯಪ್ಪಾ ಮತ್ತು ಅವನ ತಂಡದವರು ಉಗ್ರ ಹೋರಾಟ ನಡೆಸಿ ಆಂಗ್ಲ ಸರಕಾರದ ಕಣ್ಣಿಗೆ ಮಣ್ಣೆರಚಿ ಭೂಗತರಾಗಿದ್ದಾಗ ಶ್ರೀಮತಿ ಗಂಗವ್ವಾ ಗುಪ್ತವಾಗಿ ಸಂದೇಶವನ್ನು ಕಳುಸುತ್ತಿದ್ದರಲ್ಲದೆ ಅವರಿಗೆ

ಊಟಕ್ಕಾಗಿ ಬುತ್ತಿಯನ್ನು ಒದಗಿಸುತ್ತಿದ್ದಳು. ಈ ಸುದ್ಧಿಯು ಪೋಲಿಸರಿಗೆ ಗೊತ್ತಾಗಿ, ಆಗ ಪೋಲಿಸರು ಗಂಗವ್ವಳನ್ನು ಬೆದರಿಸಿ ನಿನ್ನ ಪತಿ ರಾಯಪ್ಪಾ ಮತ್ತು ಅವನ ಸಂಗಡಿಗರು ಎಲ್ಲಿ ಅಡಗಿರುವುದನ್ನು ಹೇಳು ಎಂದು ಬೆದರಿಕೆ ಹಾಕಿ, ಇವರ ಉಪಜೀವನಕ್ಕೆ ಆಧಾರವಾಗಿದ್ದ ಹಿಟ್ಟಿನ ಗಿರಣಿಯನ್ನು ಒಮ್ಮೆ 6 ತಿಂಗಳು, ಮತ್ತೊಮ್ಮೆ 9 ತಿಂಗಳು ಸರಕಾರದವರು ಸೀಲ್ ಮಾಡಿದ್ದರು. ಇದಾವುದಕ್ಕೆ ಭಯಪಡದೆ ಗಂಗವ್ವ ತನ್ನ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿಕೊಂಡು ನಡೆದಿದ್ದಳು. ಆದರೆ ಕೊನೆಗೆ ಸರಕಾರ ಇವಳನ್ನು ಬಂಧಿಸಿ 6 ತಿಂಗಳವರೆಗೆ ಬೆಳಗಾವಿಯ ಜೈಲಿನಲ್ಲಿರಿಸಿತು. ಹೀಗೆ ಒಬ್ಬ ಸಾಮಾನ್ಯ ಮಹಿಳೆಯಾದ ಗಂಗವ್ವ ಸ್ಥಳೀಯ ಮಟ್ಟದಲ್ಲಿ ಮಾಡಿದ ಸ್ವಾತಂತ್ರ್ಯ ಹೋರಾಟವು ಸ್ಮರಣೀಯ.[13]

### ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ಮಹಿಳೆಯರು:

ಬ್ರಿಟಿಷರು ಅನುಸರಿಸಿದ ವಸಾಹತು ನೀತಿಯಿಂದ ರಾಷ್ಟ್ರದ ವ್ಯವಸ್ಥಿತ ಶೋಷಣೆ ಪ್ರಾರಂಭವಾಯಿತು. ವಿಜಯಪುರ ಜಿಲ್ಲೆಯ ಮಹಿಳಾ ಕುಶಲಕರ್ಮಿಗಳು, ನೇಕಾರರು, ರೈತರು, ವ್ಯಾಪಾರಸ್ಥರು, ಕೂಲಿಗಳ, ಜೊತೆಗೆ ತೋಟಗಾರಿಕಾ ಬೆಳೆಗಳನ್ನು ಮಹಿಳೆಯರು ಬೆಳೆಯುತ್ತಿದ್ದರು. ದ್ರಾಕ್ಷಿ, ದಾಳಿಂಬೆ, ಬೋರೆ ಮತ್ತು ನಿಂಬೆ ಹಣ್ಣುಗಳ ಉತ್ಪಾದನೆಯಲ್ಲಿ ವಿಜಯಪುರ ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ವಿಜಯಪುರ ಹಣ್ಣುಗಳ ಉತ್ಪಾದನೆಯಿಂದ ಕರ್ನಾಟಕದ ಕ್ಯಾಲಿಫೋರ್ನಿಯಾ ಎಂದು ಹೆಸರು ಪಡೆದಿದೆ. ಇಲ್ಲಿಯ ಹಣ್ಣುಗಳು ಅಮೇರಿಕಾ, ಇಂಗ್ಲೆಂಡ ಮತ್ತು ಅರಬ್ ರಾಷ್ಟ್ರಗಳಿಗೆ ರಫ್ತಾಗುತ್ತಿದ್ದವು. ಇದಕ್ಕೆ ಮಹಿಳೆಯರ ಕೊಡುಗೆ ಅಪಾರವಿದೆ.[14]

ಬೌದ್ಧರು, ಕ್ರೈಸ್ತರು, ಹಿಂದೂಗಳು, ವೈಷ್ಣವರು, ಶೈವರು, ವೀರಶೈವರು, ಜೈನರು, ಮುಸಲ್ಮಾನರು, ಸೂಫಿಗಳು ಹೀಗೆ ಸ್ತ್ರೀಪುರುಷರು ಎಲ್ಲಾ ಧರ್ಮಗಳ ಪೋಷಕರಾಗಿದ್ದರು. ಕಲ್ಯಾಣದ ಚಾಲುಕ್ಯ ಒಂದನೆಯ ಸೋಮೇಶ್ವರನ ಮಡದಿ ಮೈಳಲದೇವಿ ತನ್ನ ದಾನ ಗುಣದಿಂದ ತುಂಬ ಪ್ರಸಿದ್ಧಳಾಗಿದ್ದಾಳೆ. ತರ್ದವಾಡಿ ನಾಡಿನ ಭತ್ತಗ್ರಾಮ ಹೊನ್ನವಾಡಿನ ಸೋಮೇಶ್ವರ ದೇವರಿಗೆ ಅದರ ಆಚಾರ್ಯ ಪಾಶೂಪತಾಚಾರ್ಯ ಜ್ಞಾನರಾಶಿ ವ್ಯಾಖ್ಯಾನದೇವರ ಸಮಕ್ಷಮದಲ್ಲಿ ತನ್ನ ಪತಿಯೊಂದಿಗೆ ದತ್ತಿ ನೀಡಿರುವುದನ್ನು ಶಾಸನವೊಂದು ಹೇಳಿದೆ.[15] ಮೊದಲನೇ ಸೋಮೇಶ್ವರನ ರಾಣಿ ಕೇತಲದೇವಿ ಅಗ್ರಹಾರ ಪೊನ್ನವಾಡದ ಆಡಳಿತವನ್ನು ಮಾಡುತ್ತಿದ್ದಾಗ ಅಲ್ಲಿನ ಶಾಂತಿನಾಥದೇವರ ತ್ರಿಭುವನ ತಿಲಕ ಚೈತ್ಯಾಲಯದ ರಿಷೀಯರು ಮತ್ತು ಅಜ್ಜಿಯವರ ಆಹಾರ ದಾನಕ್ಕೆ ಪತಿ ಸೋಮೇಶ್ವರನೊಂದಿಗೆ ದಾನ ನೀಡಿರುವುದು ಶಾಸನವೊಂದರಿಂದ ತಿಳಿದುಬರುತ್ತದೆ.[16]

### ಶೈಕ್ಷಣಿಕವಾಗಿ ಮಹಿಳೆಯರ ಸ್ಥಾನಮಾನ:

1854 ಕ್ಕೂ ಮೊದಲು ಪ್ರತ್ಯೇಕವಾಗಿ ಯಾವುದೇ ಬಾಲಿಕೆಯರ ಶಾಲೆಗಳು ಇರಲಿಲ್ಲ, 1854 ರಲ್ಲಿ ಗುಳೇದಗಡ್ಡದಲ್ಲಿ ಮೊದಲ ಬಾಲಿಕೆಯರ ಶಾಲೆಯನ್ನು ಪ್ರಾರಂಭಿಸಿದ್ದು, ನಂತರದಲ್ಲಿ ಬಾಲಿಕೆಯರ ಶಾಲೆಗಳು 1869 ರಲ್ಲಿ ಬಿಜಾಪುರ, ಬಾಗಲಕೋಟದಲ್ಲಿ ಸ್ಥಾಪನೆಯಾದವು. 1873ರ ನಂತರ ಇದರ ಪ್ರಗತಿ ಹೆಚ್ಚಾಯಿತು.[17]

### ಶ್ರೀಮತಿ ರಮಾಬಾಯಿ ವಾಚನಾಲಯ

ಸಂಸ್ಥಾನಿಕರಾದ ಕ್ಯಾಪ್ಟನ್ ಸರ್ ಪರಶುರಾಮ ಭಾವು ಸಾಹೇಬರು ಶಿಕ್ಷಣ ಪ್ರೇಮಿಗಳಾಗಿದ್ದು, ತಮ್ಮ ಆಳ್ವಿಕೆಯಲ್ಲಿ ಅನೇಕ ಶೈಕ್ಷಣಿಕ ಸುಧಾರಣೆಗಳನ್ನು ಮಾಡಿದರಲ್ಲದೆ, ಪ್ರಜೆಗಳಿಗೆ ಓದಲು ಅನುಕೂಲಮಾಡಿ ಕೊಡಲು ತಮ್ಮ ಪ್ರಥಮ ಮಹಾರಾಣಿಯವರಾದ ಶ್ರೀಮತಿ ಸೌಭಾಗ್ಯವತಿ ರಮಾಬಾಯಿ ಸಾಹೇಬರ ಸ್ಮರಣಾರ್ಥವಾಗಿ ದಿನಾಂಕ 25–6–1905 ರಲ್ಲಿ ಒಂದು ಗ್ರಂಥಾಲಯವನ್ನು ಸ್ಥಾಪಿಸಿದರು. ಕ್ರಿ. ಶ. 1908 ರಲ್ಲಿ ಪಿ.ಬಿ. ಹೈಸ್ಕೂಲಿನ ಎದುರುಗಡೆ ಕಟ್ಟಿಸಲಾಗಿದೆ. ಅದೇ ಇಂದಿನ ರಮಾಬಾಯಿ ವಾಚನಾಲಯವಾಗಿದೆ.[18]

**ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ**

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು 2003 ರಲ್ಲಿ ವಿಜಯಪುರ ನಗರದಲ್ಲಿ ಸ್ಥಾಪಿತವಾಗಿದೆ. ಇದು ಮಹಿಳೆಯರಿಗೆ ಮಾತ್ರ ಶಿಕ್ಷಣ ನೀಡುವುದರೊಂದಿಗೆ ಕರ್ನಾಟಕ ರಾಜ್ಯದ ಏಕೈಕ ಮಹಿಳಾ ವಿಶ್ವವಿದ್ಯಾಲಯವಾಗಿದೆ.

**ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ಮಹಿಳೆಯರು**

12 ನೇ ಶತಮಾನದ ಅಗ್ರಗಣ್ಯ ಶಿವಶರಣೆ ಅಕ್ಕನಾಗಮ್ಮಳು 14 ವಚನಗಳನ್ನು ನೀಡಿದ್ದು, ಬಸವಣ್ಣನ ಧರ್ಮಪತ್ನಿ ನೀಲಾಂಬಿಕೆಯ 126 ವಚನಗಳು, ಗುಡ್ಡವ್ವೆಯ ಒಂದು ವಚನ, ಮುಕ್ತಾಯಕ್ಕನ 37 ವಚನಗಳು,[19] ವಚನ ಸಾಹಿತ್ಯದ ಪರಂಪರೆಯ ಜೊತೆಗೆ ಜನಪದ ಸಾಹಿತ್ಯ, ಸೂಫಿ ಸಾಹಿತ್ಯ ಪರಂಪರೆಯನ್ನು ವಿಜಯಪುರ ಜಿಲ್ಲೆ ಒಳಗೊಂಡಿದೆ. ಶಾಸ್ತ್ರೀಯ ಸಂಗೀತದಲ್ಲಿ ಪದವಿಧರರಾದ ಕಮಲಾಬಾಯಿ ತಾಳಿಕೋಟೆ ವಿಜಯಪುರ ಜಿಲ್ಲೆಯ ಹಿರಿಯ ಸಂಗೀತಗಾರ್ತಿ. ಶಾಂತಾ ಚಲ್ಲ, ಮಾಲಾಬಾಯಿ ಬೀಳಗಿ, ಇವರ ಮೊಮ್ಮಗಳು ಅಮೀರಜಾನ್ ಕರ್ನಾಟಕಿ ಬಿಜಾಪುರ ಜಿಲ್ಲೆಯ ಬೀಳಗಿಯಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ 1906ರಲ್ಲಿ ಜನಿಸಿದರು. ಕನ್ನಡ ಕೋಗಿಲೆ ಎಂದೇ ಪ್ರಸಿದ್ಧರಾದ ಅಮೀರಜಾನ್ ಅವರು ಹಾಡಿದ "ವೈಷ್ಣವ ಜನತೋ" ಹಾಡು ಗಾಂಧೀಜಿಯವರ ಅಚ್ಚುಮೆಚ್ಚಿನ ಗೀತೆಯಾಗಿತ್ತು. ಲತಾ ಜಹಗೀರದಾರ್, ರಾಜಶ್ರೀ ಕುಲಕರ್ಣಿ, ವೀಣಾ ಥಿಟೆ, ವಾಣಿಶ್ರೀ ಕುಲಕರ್ಣಿ, ಸುರೇಖಾ ಪಂಡಿತ್, ಸುವರ್ಣಾ ಹಳ್ಳೂರ, ತಂಗೆಮ್ಮಾ ಜಿಗಜಿನ್ನಿ ಇನ್ನೂ ಮುಂತಾದವರು ಸಂಗೀತ ಕ್ಷೇತ್ರದಲ್ಲಿ ಸಾಧನೆಗೈದಿದ್ದಾರೆ.[20]

ಹೀಗೆ ವಸಾಹತು ಕಾಲದ ವಿಜಯಪುರ ಜಿಲ್ಲೆಯ ಮಹಿಳೆಯರು ಮಹೋನ್ನತವಾದದ್ದನ್ನು ಸಾಧಿಸಿ ಇಂದಿಗೂ ಇತಿಹಾಸದ ಪುಟಗಳಲ್ಲಿ ಶಾಶ್ವತವಾದ ಸ್ಥಾನ ಪಡೆದಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ಆದಿಲ್ ಶಾಹಿ ಕಾಲದ ಧೀರೋತ್ತರಾದ ರಾಣಿ ಚಾಂದಬೀಬಿ ಸುಲ್ತಾನರ ಪ್ರತಿನಿಧಿಯಾಗಿ ರಾಜ್ಯಭಾರ ನಡೆಸಿದ ಚರಿತ್ರೆಯನ್ನು ಕಾಣುತ್ತೇವೆ. ಅದರಂತೆಯೇ ಬ್ರಿಟಿಷರ ಆಡಳಿತದಲ್ಲಿ ವಿಜಯಪುರ ತಾಲೂಕಿನ ಜೈನಾಪುರ ಗ್ರಾಮದ ಕಾಶೀಬಾಯಿ ಸಂಗಪ್ಪ ದೇಸಾಯಿ ಎಂಬ ಹೆಸರಿನ ಧೀರ ಮಹಿಳೆ ಬ್ರಿಟಿಷ ಅಧಿಕಾರಿಯ ಆದೇಶವನ್ನುದಿಕ್ಕರಿಸಿದ ಸಂಗತಿಗಳನ್ನು ಚರಿತ್ರೆಯ ಪುಟಗಳಿಂದ ಕಾಣುತ್ತೇವೆ. ಇಂತಹ ವೀರ ವನಿತೆಯರ ನಾಡಾದ ವಿಜಯಪುರ ಜಿಲ್ಲೆಯಲ್ಲಿ ಕೆಲವು ಮಹಿಳಾ ನಾಯಕಿಯರು ಸ್ವತಂತ್ರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ದಾಖಲೆಗಳು ಸಿಗುತ್ತವೆ. ಅಂಬಲಿ ಚನ್ನಬಸಪ್ಪನವರ ಧರ್ಮಪತ್ನಿ ಶ್ರೀಮತಿ ಗಂಗೂಬಾಯಿ ಅಂಬಲಿಯವರು ಅತ್ಯಂತ ಪ್ರಮುಖರಾಗಿರುವರು. ಅದರಂತೆ ಸೀತಾಬಾಯಿ ಬಳವಳ್ಳಿ, ವೆಂಕೋಬಾಯಿ, ಪಾರ್ವತಿ, ಲಕ್ಷ್ಮೀಬಾಯಿ ಪದಕಿ, ಇಂದಿರಾಬಾಯಿ ಕಟ್ಟಿ, ರಮಾಬಾಯಿ ನರಸಾಪುರ ಮೊದಲಾದ ಮಹಿಳೆಯರು ಜಿಲ್ಲೆಯಲ್ಲಿ ಮುಂಜಾವಿನ ಸಮಯದಲ್ಲಿ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ರಾಷ್ಟ್ರಗೀತೆಯನ್ನು ಹಾಡುತ್ತಾ ಗ್ರಾಮಗಳಲ್ಲಿ ಸಂಚರಿಸಿ ರಾಷ್ಟ್ರಪ್ರೇಮವನ್ನು ಪ್ರದರ್ಶಿಸಿದ್ದಾರೆ. ಇಂಡಿ ತಾಲೂಕಿನ ಚಡಚಣ ಗ್ರಾಮವು ಮಹಿಳಾ ಹೋರಾಟಗಾರರ ಪ್ರಮುಖ ನೆಲೆಯಾಗಿತ್ತು.[21]

**ಕೊನೆಟಿಪ್ಪಣಿಗಳು**


1. ವಿಜಯಕುಮಾರ, ಎಸ್. ಶೇಕದಾರ. (2022). *ವಿಜಯಪುರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ. ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಗಳು.*ಬಿಎಲ್‌ಡಿಇ ಅಸೋಷಿಯೇಷನ್ಸ್. ಪುಟ.84.
2. ಉಷಾ, ಎಂ. (2017). *ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪುಟ. 35.

3. ಕಡಕೋಳ, ಎಚ್.ಎಮ್. (2010). *ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ.* ವಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್. ಪುಟ–117.
4. ಅಶ್ವತ್ಥಪ್ಪ, ಕೆ.ಎನ್. (2015) *ಸಮಗ್ರ ಕರ್ನಾಟಕದ ಇತಿಹಾಸ.* ಸುಭಾಷ್ ಸ್ಟೋರ್ಸ್.. ಪುಟ. 488.
5. ವಿಜಯಶ್ರೀ ಸಬರದ. (2022). ಶಿವಶರಣೆಯರ ಸಾಹಿತ್ಯ ಚರಿತ್ರೆ. ಕ್ರಿಯಾ ಮಾಧ್ಯಮ. ಪುಟ. 1.
6. ಕಡಕೋಳ, ಎಚ್.ಎಮ್. (2010). ಪೂರ್ವೋಕ್ತ. ಪುಟ. 105.
7. ಅದೇ. ಪುಟ. 115.
8. ಅದೇ. ಪುಟ. 119.
9. ಅದೇ ಪುಟ– 120.
10. ನೀಡೋಣಿ ಸ್ಪೇಷಲ್ ನ್ಯೂಸ್, ಯೂಟೂಬ್
11. ಅಶ್ವತ್ಥಪ್ಪ, ಕೆ.ಎನ್. (2015) *ಬಾಂಬೆ ಕರ್ನಾಟಕ ಇತಿಹಾಸ.* ಸುಭಾಷ್ ಸ್ಟೋರ್ಸ್. ಪುಟ.140
12. ಮಟೋಳಿ, ಎಸ್.ಬಿ. (2015). *ಜಮಖಂಡಿ ಇತಿಹಾಸ ದರ್ಪಣ.* ಪುಟ. 120–122
13. ಅದೇ. ಪುಟ. 142–143.
14. ಕಡಕೋಳ, ಎಚ್.ಎಮ್. (2010). *ಪೂರ್ವೋಕ್ತ.* ಪುಟ. 139–140.
15. ಅದೇ. ಪುಟ. 154.
16. ಅದೇ. ಪುಟ. 158.
17. ಜೇಮ್ಸ್ ಎಮ್. ಕ್ಯಾಂಪಬೆಲ್. (2001). *ಬಿಜಾಪುರ ಗೆಜಿಟಿಯರ್ (ಬಾಂಬೆ ಪ್ರೆಸಿಡೆನ್ಸಿ),* ಪುಟ.519.
18. ಮಟೋಳಿ, ಎಸ್.ಬಿ. (2015). *ಪೂರ್ವೋಕ್ತ.* ಪುಟ. 305–306.
19. ಶಿವಕುಮಾರ. (2023). ವಚನ ಬೋಧಿ. ಅಕ್ಕ ಐಎಎಸ್ ಅಕಾಡೆಮಿ.. ಪುಟ. 371–397
20. ಕಡಕೋಳ, ಎಚ್.ಎಮ್. (2010). *ಪೂರ್ವೋಕ್ತ.* ಪುಟ. 220–223.
21. ವಿಜಯಕುಮಾರ, ಎಸ್. ಶೇಕದಾರ. (2022). *ಪೂರ್ವೋಕ್ತ.* ಪುಟ. 88.